ಶ್ರೀ ಎನ್. ಹುಚ್ಚಮಾಸ್ತಿಗೌಡ.—ಜಮೀನಂ ಇರತಕ್ಕವರಿಗೆ ಜಮೀನು ಕೊಟ್ಟಿದ್ದಾರೆಂದು ಹೇಳಿದರೆ ನಾನಂ ಕೂಡಲೇ ಸ್ಪಷ್ಟವಾಗಿ ವಿಚಾರಮಾಡುತ್ತೇನೆ ಜಮೀನು ಇರತಕ್ಕವರಿಗೆ ಕೊಟ್ಟಿದ್ದರೆ ಅದನ್ನೂ ವಜಾ ಮಾಡಬೇಕೆಂದಂ ಸ್ಪಷ್ಟವಾಗಿ ಬರೆಯುತ್ತೇನೆ. ಅದಂ ರೂಲಿಗೆ ವಿರೋಧವಾಗುತ್ತದೆ.

ಶ್ರೀ ಕೆ. ಯಂಕಟಪ್ಪ.—ಮಕ್ಕಳ ಹೆಸರಿಗೆ ಕೊಟ್ಟಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಒಂದು ಕುಟುಂಬ ಏನಿದೆಯೋ ಅದರಲ್ಲಿ ಆ ರೀತಿ ಮಾಡಿದ್ದರೆ ಅನು ಕಾನೂನಿಗೆ ವಿರುದ್ಧವಾಗಿದೆಯೆಂದಂ ನಾನು ಸ್ಪಷ್ಟವಾಗಿ ತಿಳಿಸುತ್ತೇನೆ. ಈಗ ಸಫಿಷಿಯೆಂಟ್ ಹೋಲ್ಡರ್ ಯಾರು ಎಂದು ಡೆಫಿನಿಷನ್ ಇದೆ. ಆದ್ದರಿಂದ ಅಂತಹವರಿಗೆ ಕೊಡುವುದಕ್ಕಾಗುವುದಿಲ್ಲ. ಒಂದು ಪಕ್ಷ ಆ ರೀತಿ ಕೊಟ್ಟಿರುವುದು ನಿಜವಾದರೆ ದಾಖಲೆಯನ್ನು ಅವರಿಂದ ತರಿಸಿಕೊಂಡು ಉತ್ತರ ಹೇಳಬೇಕು. ಆದಕ್ಕೋಸ್ಕರ ಕಾಲ ಕೇಳಿದ್ದಾರೆ. ಒಂದು ವೇಳೆ ನಿಜವಾಗಿದ್ದರೆ ಡೆಪ್ಯುಟಿ ಕಮಿಷನರಿಗೆ ಕಾಂಟ್ಯಾಕ್ಟ್ ಮಾಡಿದ ಪ್ರಕಾರ ಅಸಿಸ್ಟೆಂಟ್ ಕಮಿಷನರ್ ಕೂಡಲೇ ಹೋಗಿ ತಹಸೀಲ್ದಾರರ ಹತ್ತಿರ ವಿಷಯಗಳನ್ನು ಸಂಗ್ರಹಿಸಿ ತಿಳಿಸಬೇಕೆಂದು ಬರೆದಿದ್ದೇನೆ ಇನ್ನೂ ಸಿಕ್ಕದೇ ಇರುವ ದಾಖಲೆಗಳನ್ನೂ ಸಹ ಕೇಳಿದ್ದೇನೆ. ಆ ದಾಖಲೆಗಳು ಬೇಕಾದರೆ ಸ್ವಲ್ಪ ಕಾಲ ಬೇಕೆಂದು ನನ್ನನ್ನು ಕೇಳಿದರು. ಆಗ ಬಹುದೆಂದು ಬರೆದಿದ್ದೇನೆ. ನಾಳೆ ಅದನ್ನು ತರಿಸುವುದಕ್ಕೆ ಅನುಕೂಲವಾದರೆ ಕೊಡುತ್ತೇನೆ. ಎಲ್ಲಾ ಅಂಶಗಳಿಗೂ ಉತ್ತರ ಬೇಕಾದರೆ ಕಾಲಾವಕಾಶ ಬೇಕೆಂದು ಕೇಳಿದರೆ, ನನ್ನ ಮನಸ್ಸಿಗೆ ಖಚಿತವಾದರೆ ಕಾಲಾವಕಾಶ ಕೊಡಬೇಕಾಗುತ್ತದೆ.

Notice of question of Privilege

re : incorrect replies by the Minister for Agriculture and Animal Husbandry about prices of fertilisers

† ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).— ಮಾನ್ಯ ಸಭಾಧ್ಯಕ್ಷಣಿಯಂವರೇ, ವ್ಯವಸಾಯ ಮಂತ್ರಿಗಳು ೧೬-೮-೧೯೭೪ರಂದು ಮಾನ್ಯ ಶ್ರೀ ಕೆ. ಎಚ್. ಹನುಮೇಗೌಡರವರಿಗೆ ಉತ್ತರ ಕೊಡುವ ಕಾಲದಲ್ಲಿ ಸಭೆಗೆ ಸರಿಯಾದಂಥ ಉತ್ತರ ಕೊಡದೆ ಈ ಸಭೆಯ ಹಕ್ಕಿಗೆ ಚ್ಯುತಿಯನ್ನು ತಂದಿದ್ದಾರೆ. ಈ ಬಗ್ಗೆ ಹಕ್ಕು ಸೂಚನೆಯನ್ನು ಮಂಡಿಸುವುದಕ್ಕೆ ಅಪ್ಪಣೆ ಕೇಳಿದ್ದೇವೆ. ೧೬-೮-೧೯೭೪ಕ್ಕಿಂತ ಮುಂಚೆ ರಾಜ್ಯ ಸರ್ಕಾರದವರು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮುಖಾಂತರ ಹಳೇ ದರದಲ್ಲಿ ಶೇಖರಣೆ ಮಾಡಿದಂಥ ಗೊಬ್ಬರವನ್ನು ವಿತರಣೆ ಮಾಡುವಾಗ ಕೇಂದ್ರ ಸರ್ಕಾರದವರು ಹೊಸ ದಾಗಿ ನಿಗದಿ ಮಾಡಿದಂಥ ಸೀಲಿಂಗ್ ಪ್ರೈಸ್‌ನ ಮೇಲೆ ಮಾರಾಟಮಾಡಲು ಕೇಂದ್ರ ಸರ್ಕಾರದಿಂದ ನಿರ್ದೇಶನವನ್ನು ಪಡೆದು ಮಾಡಿದ್ದೇವೆಂದು ಈ ಸಭೆಯಲ್ಲಿ ಮಂತ್ರಿಗಳು ಸ್ಪಷ್ಟೀಕರಣ ಮಾಡಿದ್ದಾರೆ. ಅದರ ಬಗ್ಗೆ ಮಾರನೇ ದಿವಸ ಚರ್ಚೆ ಮಾಡಿದಾಗ, ಅದರಲ್ಲಿಯೂ ನನ್ನ ಪ್ರಶ್ನೆಗೆ ಉತ್ತರ ಕೊಡುವ ಕಾಲ ದಲ್ಲಿ ಅದನ್ನು ಪ್ರಸ್ತಾಪನೆ ಮಾಡಿದ್ದಾರೆ.

11-30 A. M.

I would like to quote some portion of the reply given by the Hon. Minister on 16th August 1974. I will read from the Official Report of the Sixth Session (Page 297).

ಮಾನ್ಯ ಮಂತ್ರಿಗಳಾದ ಶ್ರೀಮಾನ್ ಚಿಕ್ಕೇಗೌಡರು ಕಾಗೋಡು ತಿಮ್ಮಪ್ಪನವರ ಪ್ರಶ್ನೆಗೆ ಉತ್ತರ ಕೊಡುತ್ತಾ ಹೇಳಿರುವ ಒಂದು ವಿಷಯವನ್ನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ ಮಾನ್ಯ ಚಿಕ್ಕೇ ಗೌಡರು ತಪ್ಪು ಉತ್ತರವನ್ನು ಕೊಡತಕ್ಕಂಥವರ ಮುಖೇನ ಈ ಸಭೆಯ ಹಕ್ಕಿಗೆ ಚ್ಯುತಿ ತಂದಿದ್ದಾರೆಂದು ಅದಕ್ಕೆ ಒಂದು ವಿವರಣೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಪಾರ್ಲಿಮೆಂಟಿನಲ್ಲಿ ಉತ್ತರ ಕೊಡ ತಕ್ಕಂಥ ಸಂದರ್ಭದಲ್ಲಿ ಸಂಬಂಧಪಟ್ಟ ಮಂತ್ರಿಗಳು ಹೇಳಿದ್ದಾರೆ. ಕರ್ನಾಟಕ ಸರ್ಕಾರ ಹಳೆಯ ದರದಲ್ಲಿ ಕೊಂಡಂಥ ಗೊಬ್ಬರವನ್ನು ಹೊಸ ದರದಲ್ಲಿ ಮಾರಾಟ ಮಾಡುವಾಗ ನಮ್ಮನ್ನು ಕೇಳಲಿಲ್ಲ ಎಂದು...

The Hon. Minister Sri N. Chikke Gowda has stated as follows :—

"A clarification was sought by the State Government in that connection. The Government of India has specifically said that from the date of the order it could be sold at the new ceiling prices."

Further, I will read the supplementary put at that time by Sri Kagodu Thimmappa.

SRI KAGODU THIMMAPPA.—Is it a fact that the option was given to the State Government ?

The Hon. Minister Sri N. Chikke Gowda has stated 'No'.

ಶ್ರೀ ಕೋಣಂದೂರು ಲಿಂಗಪ್ಪ.—ಈ ವ್ಯವಹಾರ ನಡೆದದ್ದು ಹಿಂದಿನ ಮಂತ್ರಿಗಳು ಇದ್ದಾಗಲೊ ಆಥವಾ.....

ಶ್ರೀ ಎಚ್. ಡಿ ದೇವೇಗೌಡ.—ಇಲ್ಲ. ಇವರೇ ಉತ್ತರ ಕೊಟ್ಟಿದ್ದಾರೆ. ಕಳೆದಸಾರಿ ಈ ಸಭೆಯಲ್ಲಿ ಚರ್ಚೆಯಾದಾಗ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಅಸತ್ಯವನ್ನು ನುಡಿದಿದ್ದಾರೆ ಎಂದು ಹೇಳಬೇಕಾಗುತ್ತದೆ, ಇದಕ್ಕೆ ಸ್ಪಷ್ಟೀಕರಣ ಬೇಕಾಗುತ್ತದೆ ಇದು ಬಹಳ ಗಹನವಾದ ವಿಷಯ. ಈ ಸಭೆಯಲ್ಲೇ ಮಾನ್ಯ ಕೆ. ಎಚ್. ಹನುಮೇಗೌಡರ ಪ್ರಶ್ನೆಗೆ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಇದಕ್ಕೆ ಸಂಬಂಧಪಟ್ಟ ಡಾಕ್ಯೂಮೆಂಟ್ ಇಡಬೇಕೆಂದು ಇದಕ್ಕೆ ಒಂದು ದಿವಸ ಕಾಲ ಕೊಡಿ ಎಂದು ಮಾನ್ಯ ಸಿದ್ದವೀರಪ್ಪನವರು ಒಂದು ಹೊಸ ವಾದವನ್ನು ಇಟ್ಟಾಗ ಇದನ್ನ ಬಾಯಿಯಲ್ಲಿ ಹೇಳಿದರು ರಿಟನ್ ಕ್ಲಾರಿಫಿಕೇಷನ್ ತರಿಸಲಿಲ್ಲವೆಂದು ಹೇಳಿದರು. ಈ ೩ ಕೋಟಿ ೮೦ ಲಕ್ಷ ರೂಪಾಯಿಗಳ ಗೊಬ್ಬರದ ಅವ್ಯವಹಾರವನ್ನು ಆಗೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮತ್ತು ಮಾರ್ಕೆಟಿಂಗ್ ಫೆಡರೇಷನ್ ಮುಂಖಾಂತರ ಮಾಡಿದ್ದಾರೆ. ಈ ವಿಷಯ ಪಬ್ಲಿಕ್ ಅಕೌಂಟ್ ಕಮಿಟಿ ಮುಂದೆ ಬರುತ್ತದೆ. ಆದ್ದರಿಂದ ಈ ಸಭೆಯ ಮುಂದೆ ಇಟ್ಟಿದ್ದೇನೆ ಈ ಸಂದರ್ಭದಲ್ಲಿ ಸಭೆಯನ್ನು ವಂಚಿಸತಕ್ಕ ಕೆಲಸ ಮಾನ್ಯ ಮಂತ್ರಿಗಳು ಮಾಡಿ ಸಭೆಯನ್ನು ತಪ್ಪುದಾರಿಗೆ ಎಳೆಯುವ ಪ್ರಯತ್ನ ಮಾಡಿದ್ದಾರೆಂದು ತಿಳಿಸಬೇಕಾಗುತ್ತದೆ. ಮತ್ತೊಂದು ವಿಚಾರ ಪೊಟ್ಟೆಷ್ಯಂ ಸ್ಟಾಕ್ ಬಂದಿತ್ತು ಅದರ ಮಾಹಿತಿ ನನ್ನ ಕಡೆ ಇದೆ. ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರಕ್ಕೆ ಎಲ್ಲವನ್ನೂ ಕೊಟ್ಟಿದ್ದರೆ ಎನ್ನುವುದನ್ನು ಮಾನ್ಯ ಮಂತ್ರಿಗಳು ರಾಜ್ಯದ ಹಿತ ದೃಷ್ಟಿಯಿಂದ ಸಭೆಯ ಮುಂದೆ ಇಡುವುದು ಯೋಗ್ಯವಲ್ಲ. ತಾವು ಇಟ್ಟರೆ ನಮ್ಮ ರೈತರ ಹಿತಕ್ಕೆ ಧಕ್ಕೆ ಬರಬಹುದು ಬೇಕಾದರೆ ತಮ್ಮ ಚೇಂಬರ್ಸ್‌ನಲ್ಲಿ ಅದನ್ನು ಕೊಟ್ಟರೆ ಒಪ್ಪಿಕೊಳ್ಳುತ್ತೇನೆ. ಈ ೩ ಕೋಟಿ ೮೦ ಲಕ್ಷ ರೂಪಾಯಿಗಳ ವ್ಯವಹಾರದ ಬಗ್ಗೆ ಹೇಳುತ್ತಾ ಒಂದು ವಾದವನ್ನು ಇಟ್ಟರು ಅದೇನೆಂದರೆ ಇದರಿಂದ ಬೆಳಗೊಳದ ಫ್ಯಾಕ್ಟರಿಯನ್ನು ರಿನೋವೇಟ್ ಮಾಡುತ್ತೇವೆಂದು ತಿಳಿಸಿದರು. ಇದರಲ್ಲಿ ಆಕ್ರಮ ಏನಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮತ್ತೆ ಕೆಲವು ಸೊಸೈಟಿಗಳು ಏನು ಮಾಡಿವೆ ಎಂದರೆ ಹಳೆಯ ತಾರೀಖಿನ್ನು ಹಾಕಿ ಗೊಬ್ಬರವನ್ನು ಮಾರಾಟ ಮಾಡಿವೆ, ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಕೇಳಿದ್ದಕ್ಕೆ ಮಂತ್ರಿಗಳು ನಾವು ನಿರ್ದೇಶನ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ ಆದರೆ ಅಲ್ಲಿ ರಚೀದಿ ಹಾಕಬೇಕಾದರೆ ಅದರಲ್ಲಿ ತಾರೀಖು ಇಲ್ಲ, ಕಾಲ ಇಲ್ಲ, ಗೋತ್ರ ಇಲ್ಲ, ಊರು ಇಲ್ಲ,ತಾಲ್ಲೂಕು ಇಲ್ಲ. ಡಿಸ್ಟ್ರಿಕ್ಟ್ ಇಲ್ಲ, ಏನೇನು ಇಲ್ಲ, ಈ ರೀತಿ ಅವ್ಯವಹಾರ ನಡೆಯುತ್ತಿದೆ. ಇದರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನಾನು ಕೊಡುವುದು ಯೋಗ್ಯವಲ್ಲ. ಏಕೆಂದರೆ ಈ ವಿಷಯ ಕಮಿಟಿ ಮುಂದೆ ಇರುವುದರಿಂದ ಮುಂದೆ ಅದರ ಪ್ರೊಸೀಡಿಂಗ್ಸ್ ಬರುತ್ತದೆ. ಈ ಒಂದು ವ್ಯವಹಾರದಲ್ಲಿ ಹಳೆಯ ದರವನ್ನು ಬಿಟ್ಟು ಹೊಸ ದರದಲ್ಲಿ ಮಾರಾಟ ಮಾಡಿದ್ದಾರೆ. ಪಾರ್ಲಿಮೆಂಟಿನಲ್ಲಿ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಇದರ ಬಗ್ಗೆ ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರಕ್ಕೆ ಯಾವ ನಿರ್ದೇಶನವನ್ನು ಕೊಟ್ಟಿಲ್ಲವೆಂದು ಕೆಟಗಾರಿಕಲ್ ಆಗಿ ಹೇಳಿದ್ದಾರೆ. One hon. Member has asked the following question there :—

"Whether the Karnataka State and approached the Government of India to permit them to sell the pre-1st June stock at new rates and whether the Government of India issued any directions in this respect permitting the State Government to sell at new rates ?

The Minister replied as follows —

"No request was received from Karnataka State for permission to sell pre-1st June stock at old rates by the Ministry of Agriculture and Information and as such issue of any direction to the State in this regard from the Ministry did not arise."

ಆದ್ದರಿಂದ ಈ ಸಭೆಯು ಮುಂದೆ ತೆಗೆದುಕೊಂಡ ನಿಲುವು ಸತ್ಯಕ್ಕೆ ದೂರವಾದುದು ಎಂದು ತಾವು ಇದು ಒಂದರಿಂದಲೇ ನಿರ್ಧಾರಮಾಡಿ ಮಾನ್ಯ ಮಂತ್ರಿಗಳು ಅನ್ ಕಂಡೀಷನಲ್ಲಾಗಿ ಅಪಾಲಜಿ ಕೇಳಿಕೊಳ್ಳಬೇಕೆಂದು ಹೇಳಬೇಕು. ಜೊತೆಗೆ ಇದನ್ನು ಪ್ರಿವಿಲೇಜ್ ಕಮಿಟಿಗೆ ಕಳುಹಿಸಿಕೊಡಬೇಕೆಂದೂ ಹಾಗೂ ಪಾರ್ಲಿಮೆಂಟ್‌ನಲ್ಲಿ ಇದರ ಬಗ್ಗೆ ವಿಚಾರಣೆ ಮಾಡಬೇಕು ಎಂದೂ ಹೇಳಿ ನಾನುತಮ್ಮ ಮುಖೇನ ಮಾನ್ಯ ಸಭೆಯು ಅನುಮತಿಯನ್ನು ಕೇಳುತ್ತೇನೆ.

† ಶ್ರೀ ಎಂ. ಎಸ್ ಕೃಷ್ಣನ್.—ನಾವು ಕೇಳುವುದು ಇಷ್ಟೇ, ಪ್ರಿವಿಲೇಜ್ ಕಮಿಟಿಗೆ ಏತಕ್ಕೆ ರೆಫರ್ ಮಾಡಬೇಕು ? ಈ ವ್ಯವಹಾರ ಎಷ್ಟು ದೂರ ನಡೆದಿದೆ ? ಇದರಲ್ಲಿ ಅಕ್ರಮ ವ್ಯವಹಾರ ಬೇರೆ ವಿಷಯ. ಇನ್‌ವೆಸ್ಟಿಗೇಷನ್ ಮಾಡಿದರೆ ಯಾರು ತಪ್ಪಿತಸ್ಥರು ಎಂದು ಗೊತ್ತಾಗುತ್ತದೆ. ತಪ್ಪಿತಸ್ಥರಿಗೆ ಶಿಕ್ಷೆ ಆಗಲೇಬೇಕು ಈ ವ್ಯವಹಾರದಲ್ಲಿ ಲಕ್ಷಾಂತರ, ಕೋಟ್ಯಾಂತರ ರೂಪಾಯಿ ವ್ಯವಹಾರ ನಡೆದಿದೆ ಯೆಂದು ತಿಳಿದುಬಂದಿದೆ. ತಾವು ತಮ್ಮನ್ನು ತಪ್ಪು ದಾರಿಗೆ ಎಳೆದಿದ್ದೀರಿ ? ಹೇಗೆ ಎಂದರೆ ನೊದಲನೆಯದು ಕೇಂದ್ರಸರ್ಕಾರದವರು ನಮಗೆ ಯಾವರೀತಿ ನಿರ್ದೇಶನ ಕೊಟ್ಟಿದ್ದಾರೆಂದು ಸ್ಪಷ್ಟವಾಗಿ ಹೇಳಿದ್ದೀರಿ? ಅದರಿಂದ ಅವರು ಕೊಟ್ಟಿರಬೇಕು ಎಂದು ನಂಬೋಣ. ಆದರೆ ಪಾರ್ಲಿಮೆಂಟ್‌ನಲ್ಲಿ ಉತ್ತರ ಕೊಡುವಾಗ ಅಲ್ಲಿನ ಮಂತ್ರಿಗಳು ರಾಜ್ಯಸರ್ಕಾರಕ್ಕೆ ನಾವು ಆದೇಶ ಕೊಟ್ಟಿಲ್ಲವೆಂದು ಹೇಳಿದ್ದಾರೆ, ಇದರಲ್ಲಿ ಯಾವುದನ್ನು ನಂಬುವುದು. ಇದರ ಬಗ್ಗೆ ನಾವು ಡಾಕ್ಯುಮೆಂಟನ್ನು ಸಭೆಯು ಮುಂದೆ ಮಂಡಿಸಬೇಕಿದಾಗ ತಾವು ಅದಕ್ಕೆ ಹಿಂಜರಿದಿದ್ದೀರಿ. ಮಾನ್ಯ ಕಾಗೋಡು ತಿಮ್ಮಪ್ಪನವರ ಪ್ರಶ್ನೆಗೆ ಕೇಟಗಾರಿಕಲ್ಲಾಗಿ 'ನೋ' ಎಂದು ಹೇಳಿದ್ದೀರಿ ? ಇದರಲ್ಲಿ ಡಿಸ್ಕ್ರಿಷನ್ ವಿಚಾರ ಮಾತನಾಡಿರಬೇಕಾದರೆ in my opinion, it is a matter that you have drawn us away. ಹಳೆಯ ಗೊಬ್ಬರಕ್ಕೆ ಹೊಸ ರೇಟು ಮಾಡಿರುವುದರಿಂದ ಸಾವಿರಾರು ಜನರಿಗೆ ಇದರಿಂದ ತೊಂದರೆಯಾಗಿದೆ. ಇದರಲ್ಲಿ ನಿಜವಾಗಿಯೂ ಅಕ್ರಮ ವ್ಯವಹಾರ ನಡೆದಿದೆ. ಇದಕ್ಕೆ ನೀವು ಗುರಿಯಾಗಬೇಕಾಗುತ್ತದೆ. ಆದ್ದರಿಂದ ನಾನು ಹೇಳುವುದು ಮಾನ್ಯ ಮಂತ್ರಿಗಳು ಇದರಲ್ಲಿ ಡಿಸ್ಕ್ರಿಷನ್ ಇದೆಯೆಂದು ಹೇಳಬೇಕಾಗಿತ್ತು. ಪಾರ್ಲಿಮೆಂಟ್‌ನಲ್ಲಿ ಸ್ಪಷ್ಟವಾದ ತೀರ್ಮಾನವಾಗಿದೆ. It is a fit case to refer to the privilege Committee unless the Minister says that he is sorry for it. In think in fairness of things, it is better that the matter is reffered to the Privilege Committee or the Minister must say that he has committed a mistake for which he must feel sorry. ಆ ರೀತಿ ಹೇಳುತ್ತಾರೆಂದು ನಾನು ನಂಬಿದ್ದೇನೆ. ಮಾನ್ಯ ಮಂತ್ರಿಗಳು ಏನು ಹೇಳುತ್ತಾರೋ ನೋಡೋಣ.

† SRI CHIKKE GOWDA (Minister for Agriculture and Animal Husbandry).—On 1st June 1974, the Government of India revised the statutory ceiling prices of certain fertilisers as also the maximum selling prices for all fertilisers received from the Central Pool.

On 16th August, 1974 Sri K. H. Hanume Gowda, called the attention of the House to the rise in the prices of fertilisers. During the course of discussion on the Calling Attention Notices No. 4, 15 and 49 by Sri K. H. Hanume Gowda and others, regarding the rise in prices of fertilisers, I had made the State Government's position clear to the Hon'ble House. The statement made by me on 17th August 1974 clearly puts forth all answers to the points now raised in the privilege motion.

As the House is aware, the maximum selling prices of fertiliser are fixed by the Government of India under the Fertiliser Control order which is issued under the Essential Commodities Act. It may be kindly noticed that these prices are the ceiling prices and not the selling prices of fertilisers While fertilisers are not to be sold at prices higher than these ceiling prices, the dealers and retailers are free to sell at any price below the ceiling price as notified by the Government of India. However, there is no law by which the State

Government can compel a dealer to sell fertilisers at a particular price excepting the fact that the should not sell the fertilisers above the maximum selling price. Perhaps certain States may have enabled themselves to compel dealers to sell fertilisers at a particular price by resorting to the Defence of India rules. I may however clarify that the Defence of India rules are normally resorted to only in cases where the maintenance of essential supplies to the people in general are affected jeopardising the security and defence of the State.

As mentioned earlier, on 1st of June, 1974. the State Government received telegraphic information from the Ministry of Agriculture, Government of India to the effect that the statutory ceiling prices on certain fertilisers have been revised with effect from that date. The State Government in turn intimated the said fact to the Director of Agriculture who has taken action to publicise the new ceiling prices. I would like to clarify that the State Government did not give any direction to any person whatsoever to the effect that fertilisers should be sold at a particular price, excepting the fact that the new ceiling prices would apply. This necessarily means that fertilisers cannot be sold above the new ceiling prices.

The main contention of the Motion is that the State Government gave false information before this House, that the Government of India had not issued any orders to the State Government regarding the prices at which the old stocks of fertilisers prior to 1-6-1974 should be sold and. that, whereas the State Government had an option to sell old stocks at old prices the State Government did not take such a decision. The points now raised are (a) the Government of India had issued no specific instructions that all stocks should be sold at the new ceiling prices and (b) it was open to the State Government to have compelled all dealers including the Marketing Federation and Agro Industries Corporation to sell the old stocks at the pre-1-6-74 prices and the new stocks at the subsequently enhanced prices.

I would like to answer these two points together. As earlier explained in my statement on 17th August 1974 and in the subsequent debate, the State Government did not have any powers with them by which old prices could have been enforced on the old stocks, as new ceiling prices had been fixed. If the State Government could have issued any directions in this regard, they might have issued it only to the two State agencies *i.e.* the Agro Industries Corporation and the Marketing Federation. Even these bodies are autonomous organisations.

I may again stress here that the new ceiling prices were applicable to all stocks of fertilisers. If we had asked only the Agro Industries Corporation and the Marketing Federation to sell the old stocks at prices lower than the ceiling fixed by the Government of India there would have been many complications and possible malpractices as indicated in my earlier statement in the Hous

Although an option was open to the State Government to have taken such a course of action, the Government after due deliberations came to the conclusion that no specific directions need be given to the agencies to sell old stocks of fertilisers at particular prices. I have explained earlier that the State Government did not have with them any powers to enforce such a lower selling price. This is consistent with our earlier policy when prices of fertilisers were reduced by the Government of India. When the reduced prices were notified the State Government had also earlier decided that only reduced ceiling prices would be applicable and that old stocks of fertilisers could not be sold at the old higher prices.

I may respectfully mention that I have not made any false statement before this Hon'ble House. The consultations which the Hon'ble Members refers to with the Government of India were oral consultations as already explained. During the course of the Debate in the last session. I have not said that the Government of Indian gave specific directions to the State Government to sell all stocks at the enhanced prices. The clarification given by the Central Government was to the effect that the notified prices of fertilisers were the maximum selling prices which should not be exceeded. The action by the State Government is consistent with these clarifications given by the Government of India. I may, with due respect to the Hon'ble House repeat that as Minister for Agriculture I have not stated that the Government of India gave specific instructions to sell ole stocks of fertilisers at the higher rates. The question of breach of privilege of the House therefore does not arise.

Further, I may also add here Madam, that in regard to the question which has been referred to by the Leader of the Opposition while answering question to some of the hon. Members, that no request was made by the Government of Karnataka. We never wrote to the Government of India about any clarifications, because, under the Statutory Fertiliser Control Order, when we receive new prices will come into force from 1-6-1974. That means, there was no necessity to write to them. The Hon. Minister has stated in Parliament that we have not made any specific request to the Government of India in this matter. Therefore, I request the Speaker to disallow this privilege motion.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ತಾವು ಈಗ ಇದರ ಬಗ್ಗೆ ಜಡ್ಜ್‌ಮೆಂಟ್ ಕೊಡುವುದು ಕಷ್ಟವಾಗಿದೆ. 'ನೋ ರಿಕ್ವೆಸ್ಟ್ ವೇಡ್' ಎಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ. ಕ್ಯಾಟ್ ಈಸ್ ಔಟ್ ಆಫ್ ದಿ ಬ್ಯಾಗ್. ಇದರಲ್ಲಿ ಇನ್‌ಕ್ಲೂಡಿಂಗ್ ಚೀಫ್ ಮಿನಿಸ್ಟರ್. ಕೇಂದ್ರ ಸರ್ಕಾರದಿಂದ ಟೆಲಿಗ್ರಾಂ ಬಂದಮೇಲೆ ರಿಟನ್ ಕ್ಲಾರಿಫಿಕೇಷನ್ ಯಾವುದೂ ಬಂದಿಲ್ಲ ಎಂದು ಹೇಳುತ್ತಾರೆ. Including the Chief Minister-he has said like this : "I have categorically stated that we have got it confirmed and we have acted accordingly" ಎಂದು ಈಗ ಮಾನ್ಯ ಮಂತ್ರಿಗಳು ಒಂದು ವಾದವನ್ನು ನಮ್ಮ ಮುಂದಿಟ್ಟಿದ್ದಾರೆ. ಮಾರ್ಕೆಟಿಂಗ್ ಫೆಡರೇಷನ್, ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಆಟಾನಮಸ್ ಬಾಡಿಗಳು ಎಂದು, ಮತ್ತು ಇವುಗಳ ಮೇಲೆ ಸರ್ಕಾರಕ್ಕೆ ಅಧಿಕಾರವಿಲ್ಲ ಎಂದು ಹೇಳಿದ್ದಾರೆ. ಒಂದು ಹೊಸ ವಿಧಾನವನ್ನು

ಮನೆಯ ಮುಂದೆ ಇಟ್ಟಿದ್ದಾರೆ. ಮಾರ್ಕೆಟಿಂಗ್ ಫೆಡರೇಷನ್ ಆಟಾನಮಸ್ ಬಾಡಿ ಎಂದು ಅವರು ಸಮರ್ಥನೆ ಮಾಡುವುದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಇವತ್ತು ಇಲ್ಲಿರತಕ್ಕ ಸ್ಪೆಸಿಫಿಕ್ ಪಾಯಿಂಟ್ ಏನೆಂದರೆ "is it not a fact that option was given to the State Government" ಅದಕ್ಕೆ ಅವರು "No" ಎಂದು ಹೇಳಿದ್ದಾರೆ. ಆದ್ದರಿಂದ ಇದನ್ನು ಕವಿಟಿಗೆ ರೆಫರ್ ಮಾಡಬೇಕು. ಮಾನ್ಯ ಪಾರ್ಲಿಮೆಂಟರಿ ಸಚಿವರು ನಮ್ಮ ರೆಸ್‌ಕ್ಯೂಗೆ ಬರಬೇಕು. ಏಕೆಂದರೆ ಅವರು ಸತ್ಯ ಹೇಳುತ್ತಾರೆ ಎಂದು ಲೆಕ್ಕ ಹಾಕುತ್ತೇನೆ. ಇದು ಏನು ಅರ್ಥ ಕೊಡುತ್ತದೆ ? ನನಗೆ ಅಷ್ಟು ಇಂಗ್ಲೀಷ್ ಬರುವುದಿಲ್ಲ. ಮಾನ್ಯ ಕೃಷ್ಣ ಅವರು ಹೇಳಬೇಕು

ಶ್ರೀ ಎಸ್. ಎಂ. ಕೃಷ್ಣ.—ನಿಮಗೆ ಬರುವಷ್ಟೇ ಇಂಗ್ಲೀಷ್ ನನಗೆ ಬರುವುದು.

ಶ್ರೀ ಎಚ್. ಡಿ. ದೇವೇಗೌಡ —ದಯಮಾಡಿ ಹೇಳಿ. "Is it not a fact that option was given to the State Government ಟಿಂದರೆ No" ಎಂದು ಹೇಳಿದ್ದಾರೆ. ಇದಕ್ಕೆ ತಾವು ಏನು ಹೇಳುತ್ತೀರಿ ? ಕ್ಯಾಟಗಾರಿಕಲ್ ಆಗಿ ಪಾರ್ಲಿಮೆಂಟಿನಲ್ಲಿ ಉತ್ತರ ಕೊಟ್ಟಿರುವುದು, ಡಾಕ್ಯುಮೆಂಟ್ಸ್ ಅನ್ನು ನಾನು ಕೊಡುತ್ತೇನೆಂದು ಹೇಳಿದ್ದೇನೆ. ಅಂಕಿಅಂಶಗಳನ್ನು ಕೊಡುವುದಕ್ಕೆ ನಾನು ತಯಾರಿದ್ದೇನೆ. ಸ್ಟೇಟ್ ಫಾರ್ಮರ್ಸ್ ದೃಷ್ಟಿಯಿಂದ ಬೇಡ ಎಂದು ಹೇಳಿದರೆ ಬಿಡುತ್ತೇನೆ.

He must u conditionally apologise to this House. ಈ ವಿಷಯದಲ್ಲಿ ಅವರು ಅನ್‌ಕಂಡೀಷನಲ್ ಆಗಿ ಹೇಳಬೇಕು ಆಂಧ್ರದಲ್ಲಿ ಮಾನ್ಯ ತಿಮ್ಮಾರೆಡ್ಡಿಯವರ ಗೊಬ್ಬರದ ಪ್ರಕರಣ ತಮಗೆ ಗೊತ್ತಿದೆ. ಇದು ಜೂನ್ ಅಥವಾ ಜುಲೈ ತಿಂಗಳಲ್ಲಿ ದೊಡ್ಡ ಹಗರಣವಾಗುತ್ತದೆ. ಇದಕ್ಕೆ ನಾನು ಹೇಳುತ್ತಿದ್ದೇನೆ.

ಇದಕ್ಕೆ ಏನು ಹೇಳ್ಕುತ್ತೀರಾ ಹೇಳಿ ?

"The Government of India dil not issue any order to the State Government regarding the price at which the old stock to be disposed of. They have fixed only the ceiling price. It has been categorically stated in that reply that in some of the States like Rajasthan, UP and some other States to sell the old stock at the old rate." He says that option was given to the State Government.

SRI N. CHIKKE GOWDA.— When the price is fixed according to the Fertilisers Control Order, no person can sell it at a lower price. An impression is sought to be made out that option was given to the State Government. I can say that it was not an option given to us We cannot sell it bevoud the ceiling price. There is no law where we can compel any person to sell it at a lower price.

SRI H D. DEVE GOWDA — The Hon. Minister has said that the Government has no power to direct the Marketing Federastion and the Agro Industries Corporation to sell the old stock at the old rate because they are autonomous bodies. We have to examine the point whether the State Government has got power or not to issue a direction to these bodies. The Government can even requisition the stock from the private dealers according to the Essential Commodities Act. There are many laws to deal with private dealers.

SRI M. S. KRISHNAN — The breach of privilege arises only when the member or the Minister makes a false statement or an incorrect statement wilfully and knowingly. I am trying to point out that it is not an incorrect statement. What he has stated earlier and what he has said just now is at variance. Therefore it is a lie. Hence it attracts the Rules of Procedure; and it is a matter of breach of privilege. That is why this matter either be referred ot the Committe of Privileges or he must unconditionally apologise to the House.

SRI N. CHIKKE GOWDA.— There is no law under which the State Government can compel any dealer to sell the fertiliser at the lower price. To that extent there was no option for us. The Government of India had sent us a telegram in this regard. I shall read it for the benefit of the House. The price of urea is fixed at Rs. 1,980. This telegram is in consonance with the Fertiliser Control Order. When the order has been communicated to us the prices would automatically come into force. I request the Hon Leader of the Opposition to indicate me any order or rule by which we can compel any dealer or any other agency to sell it at the lower rate. This order has come into effect just like the like in price of pertol and other luxury goods. The prices wouldcome into effect on the day on which it is announced. When the Government ofIndia raise any price, we cannot question them In the same way I cannot issue any order to sell the fertiliser at the old rate.

Whatever I have stated in the House and also the relevant papers I have laid when I have answered to that statement, I have not misled the House and I have not thus committed breach of privilege. I therefore request the Hon. Speaker to disallowthe berach of privilege motion.

ಶ್ರೀ ಎಚ್. ಡಿ. ದೇವೇಗೌಡ.— ನಾನು ಆವೊತ್ತೇ ಹೇಳಿದ್ದೇನೆ. ಈಗ ತಾವು ದಯಮಾಡಿ ಹೇಳ್ರಿ ಇದು, ಪ್ರಿವಿಲೇಜ್ ಕಮಿಟಿಗೆ ಹೋಗಬೇಕು.

ಅಧ್ಯಕ್ಷರು.— ಆವೊತ್ತು ಮಾನ್ಯಸದಸ್ಯರು ಕೇಳಿದಾಗ ನಾನೂ ಕೂಡ ಚೇರ್‌ನಲ್ಲಿ ಇದ್ದೆ.

ಶ್ರೀ ಎಚ್. ಡಿ. ದೇವೇಗೌಡ.— ಆದುದರಿಂದ ಇದನ್ನು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾತಿ.

ಅಧ್ಯಕ್ಷರು.— ನಾಳೆ ಇದರ ಬಗ್ಗೆ ರೂಲಿಂಗ್ ಕೊಡುತ್ತೇನೆ.

Stainles Steel allotment issue.

ಶ್ರೀ ಎಚ್. ಡಿ. ದೇವೇಗೌಡ.— ಇನ್ನೊಂದು ವಿಷಯ ಏನೆಂದರೆ ಸ್ಟೈನ್‌ಲೆಸ್ ಸ್ಟೀಲ್ ಪ್ರಕರಣದ ಬಗ್ಗೆ ಶ್ರೀಮಾನ್ ಎಸ್. ಎಂ. ಕೃಷ್ಣರವರು ಸ್ಟೇಟ್‌ಮೆಂಟ್ ಮಾಡುತ್ತೇನೆ ಎಂದು ಹೇಳಿದ್ದರು. ನಾಳೆಯೆ ಕೊನೇ ದಿನವಾದುದರಿಂದ ಎಷ್ಟು ಕೆಲಸ ಆಗುತ್ತದೋ ಅಷ್ಟು ಆಗಲಿ. ಆ ಬಗ್ಗೆ ನಾಳೆ ಸ್ಟೇಟ ಮೆಂಟ್ ಮಾಡುತ್ತಾರೆಯೋ ?

SRI S. M. KRISHNA.— I have got the report. I will be making a statement tomorrow.

Bill relating to Independence of The Legislature Secretariat

ಶ್ರೀ ಹೆಚ್. ಡಿ. ದೇವೇಗೌಡ — ಇನ್ನೊಂದು ಮುಖ್ಯವಾದ ವಿಷಯ. ಸರ್ಕಾರದವರು ದುಡ್ಡು ಬರುವ ಬಿಲ್ಲನ್ನು ಅತುರದಿಂದ ಕಾತುರದಿಂದ ಇಂಟ್ರಡ್ಯೂಸ್ ಮಾಡುತ್ತಾರೆ. ಆದುದರಿಂದ ನಾನು ತಮ್ಮಲ್ಲಿ ಮುಖ್ಯವಾಗಿ ಕೇಳುವುದು ಲೆಜಿಸ್ಲೇಚರ್ ಇಂಡಿಪೆಂಡೆನ್ಸ್ ಬಗ್ಗೆ ಏನು ಮಾಡುತ್ತೀರಿ ? ಅದನ್ನು ಮೊದಲು ಹೇಳಬೇಕು. ನಾನು ಕಾನ್‌ಸ್ಟಿಟ್ಯೂಷನಲ್ ಪಾಯಿಂಟ್‌ನ್ನು ರೈಸ್ ಮಾಡುವುದಕ್ಕೆ ಹೋಗುವುದಿಲ್ಲ. ತಾವು ಈಪೊತ್ತಿನ ಅಜೆಂಡಾದಲ್ಲಿ ಫೈನಾನ್ಸ್ ಬಿಲ್‌ನ್ನು ಇಂಟ್ರಡ್ಯೂಸ್ ಮಾಡುವುದಕ್ಕೆ ಹಾಕಿ